# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಬಿಬಿಎಂಪಿ/ಐಟಿ/ಎಸ್‌ವೈಎಸ್(ಪಿಆರ್)/19/2021-22/2** **ದಿನಾಂಕ: 31-08-2021**

**ರವರಿಗೆ:-**
**ಅಧೀಕ್ಷಕ ಅಭಿಯಂತರರು (ವಿದ್ಯುತ್)**

**ಮಾನ್ಯರೆ,**

**ವಿಷಯ:-** **ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಿರಿಯ ಅಭಿಯಂತರರ ಹುದ್ದೆಗಳಿಗೆ ಹೊಸ Closed User Guroup (CUG) ಸಂಚಾರಿ ದೂರವಾಣಿ ಸಂಖ್ಯೆಗಳನ್ನು ವಿತರಿಸುವ ಕುರಿತು.**

**ಉಲ್ಲೇಖ:-**
1. **ಆಯುಕ್ತರು, ಬೃ.ಬೆಂ.ಮ.ಪಾಲಿಕೆರವರ ಸುತ್ತೋಲೆ ಪತ್ರದ ಸಂಖ್ಯೆ: ಬಿಬಿಎಂಪಿ/ಎಸ್‌ವೈಎಸ್/ಜಿಎಲ್/407/2007-08, ದಿನಾಂಕ: 16-10-2018.**
2. **ವಿಶೇಷ ಆಯುಕ್ತರು (ಆರೋಗ್ಯ ಮತ್ತು ಮಾಹಿತಿ ತಂತ್ರಜ್ಞಾನ)ರವರ ದಿನಾಂಕ: 18-06-2021ರ ನಡವಳಿಗಳು.**
3. **ಮಾನ್ಯ ಮುಖ್ಯ ಆಯುಕ್ತರು ರವರ ಸುತ್ತೋಲೆ ಪತ್ರದ ಸಂಖ್ಯೆ: ಮುಖ್ಯ ಆಯುಕ್ತರು/ ಬಿಬಿಎಂಪಿ/ಪಿಆರ್/19/2021-22, ದಿನಾಂಕ: 09-07-2021.**
4. **ಈ ಕಛೇರಿ ಸಮಸಂಖ್ಯೆ ಪತ್ರದ ದಿನಾಂಕ: 04-08-2021**

**<<<<<>>>>>**

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಉಲ್ಲೇಖ(1)ರ ಸುತ್ತೋಲೆಯಲ್ಲಿ ಪಾಲಿಕೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ / ನೌಕರರುಗಳಿಗೆ ವಿತರಿಸುತ್ತಿರುವ BSNL CUG Sim Card ಬಳಕೆ ಮಾಡುವ ಕುರಿತು ಸುತ್ತೋಲೆಯನ್ನು ಹೊರಡಿಸಲಾಗಿತ್ತು. ಆದರೆ, ಪಾಲಿಕೆಯ ಮಾಹಿತಿ ತಂತ್ರಜ್ಞಾನ ಇಲಾಖೆಯ ವತಿಯಿಂದ ಪಾಲಿಕೆಯ ಅಧಿಕಾರಿ / ನೌಕರರುಗಳಿಗೆ ವಿತರಿಸುತ್ತಿರುವ BSNL CUG Sim Cardಗಳನ್ನು ಆಯಾ ಘಟಕದ ಅಧಿಕಾರಿ / ನೌಕರರು ಬೇರೆ ಬೇರೆ ಸ್ಥಳಗಳಿಗೆ ವರ್ಗಾವಣೆ / ಸ್ಥಾನಪಲ್ಲಟವಾದ ನಂತರ ತಾವು ಬಳಸುತ್ತಿರುವ ದೂರವಾಣಿ ಸಂಖ್ಯೆಯನ್ನು ಆಸ್ಥಾನಕ್ಕೆ ವರ್ಗಾವಣೆಗೊಳ್ಳುವ ಅಧಿಕಾರಿ / ನೌಕರರಿಗೆ ಹಸ್ತಾಂತರಿಸದೇ ತಾವು ವರ್ಗಾವಣೆಗೊಂಡ ಸ್ಥಳಕ್ಕೆ ಕೊಂಡೊಯ್ಯುತ್ತಿರುವ ವಿಚಾರವು ಸರ್ವೇ ಸಾಮಾನ್ಯವಾಗಿರುತ್ತದೆ.

ಉಳಿದಂತೆ, ಅನ್ಯ ಸೇವೆಯ ಮೇಲೆ ಪಾಲಿಕೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ / ನೌಕರರು ಪಾಲಿಕೆಯ ಕರ್ತವ್ಯದಿಂದ ಬಿಡುಗಡೆಗೊಂಡ ನಂತರ ತಾವು ಬಳಸುತ್ತಿದ್ದ ದೂರವಾಣಿ ಸಂಖ್ಯೆಯನ್ನು ಹಿಂತಿರುಗಿಸುತ್ತಿದ್ದು, ಇದರಿಂದಾಗಿ ಪಾಲಿಕೆಯ ನಿಗದಿತ ಹುದ್ದೆಗಳ ಅಧಿಕಾರಿ / ನೌಕರರುಗಳಿಗೆ ಸಾರ್ವಜನಿಕರು, ಜನಪ್ರತಿನಿಧಿಗಳು, ಪಾಲಿಕೆಯ ಅಧಿಕಾರಿ / ನೌಕರರು ಸಂಪರ್ಕಿಸಲು ಸಾಧ್ಯವಾಗುತ್ತಿಲ್ಲ ಅಥವಾ ಸಂಪರ್ಕಿಸಿದಲ್ಲಿ ತಾವು ವರ್ಗಾವಣೆಗೊಂಡಿರುವುದಾಗಿ ತಿಳಿಸಿ ಅನ್ಯ ದೂರವಾಣಿ ಸಂಖ್ಯೆಗೆ ಸಂಪರ್ಕಿಸುವಂತೆ ತಿಳಿಸಲಾಗುತ್ತಿದೆ. ಇದರಿಂದಾಗಿ ಸಾರ್ವಜನಿಕರ ಅಹವಾಲುಗಳನ್ನು ಸಮರ್ಪಕವಾಗಿ ಪರಿಹರಿಸಲು ಸಾಧ್ಯವಾಗುತ್ತಿಲ್ಲ.

-2-

ಇದಲ್ಲದೆ, ಪಾಲಿಕೆ ವಿವಿದ ಸಾರ್ವಜನಿಕ ಅಹವಾಲು ವೇದಿಕೆಗಳಾದ ಸಹಾಯ-2.0 (ನಮ್ಮ ಬೆಂಗಳೂರು ಆಪ್) ಇತ್ಯಾದಿಗಳಲ್ಲಿ ಅಧಿಕಾರಿ / ನೌಕರರ ದೂರವಾಣಿ ಸಂಖ್ಯೆಗಳನ್ನು ನಮೂದಿಸಲಾಗಿದ್ದು, ವರ್ಗಾವಣೆ / ಸ್ಥಾನಪಲ್ಲಟ ಮುಂತಾದ ಸಂದರ್ಭಗಳಲ್ಲಿ ದೂರವಾಣಿ ಸಂಖ್ಯೆಗಳನ್ನು ವ್ಯವಸ್ಥಿತವಾಗಿ ಪಾಲಿಕೆಯ ಮಾಹಿತಿ ತಂತ್ರಜ್ಞಾನ ಇಲಾಖೆಯಲ್ಲಿ update ಮಾಡದೇ ಇರುವುದರಿಂದ ಪಾಲಿಕೆಯ ಅಂತರ್ಜಾಲದಲ್ಲಿ ಅಪಾರ ಪ್ರಮಾಣದ ಸಾರ್ವಜನಿಕ ದೂರುಗಳು ವಿಲೇವಾರಿಯಾಗದೇ ಬಾಕಿ ಇರುವುದು ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಉಲ್ಲೇಖ(3)ರಂತೆ ಹಲವಾರು ಮಾರ್ಗಸೂಚಿಗಳನ್ನು / ಮಾನದಂಡಗಳನ್ನು ಪಾಲಿಸಲು ಸೂಚಿಸಿ ಸುತ್ತೋಲೆ ಹೊರಡಿಸಲಾಗಿದೆ.

ಅದರಂತೆ, ಉಲ್ಲೇಖ (4)ರಂತೆ ಮೊದಲ ಹಂತವಾಗಿ ಇಂಜಿನಿಯರಿಂಗ್ ವಿಭಾಗಕ್ಕೆ ಹೊಸ ಸಿಮ್ ಗಳನ್ನು ನೀಡಲಾಗಿರುತ್ತದೆ. ಮುಂದುವರೆದಂತೆ ಪಾಲಿಕೆಯ ಕಾರ್ಯಕಾರಿ ಅಧಿಕಾರಿಗಳಾದ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಿರಿಯ ಆರೋಗ್ಯ ನಿರೀಕ್ಷಕರುಗಳಿಗೆ ಎರಡನೇ ಹಂತದಲ್ಲಿ BSNL CUG Sim Cardಗಳನ್ನು ವಿತರಿಸಲು ಯೋಜಿಸಿದ್ದು, ಅದರಂತೆ ತಮ್ಮ ತಮ್ಮ ವಲಯಕ್ಕೆ ಸಂಬಂದಿಸಿದಂತೆ, ಅಭಿಯಂತರರುಗಳಿಗೆ BSNL CUG Sim Cardಗಳನ್ನು ಈ ಪತ್ರಕ್ಕೆ ಲಗತ್ತಿಸಿರುವ ಅನುಬಂಧ-1 ರಂತೆ ಹಂಚಿಕೆ ಮಾಡಿದೆ.

ಸದರಿ ಸಿಮ್ ಕಾರ್ಡ್‌ಗಳನ್ನು ದಿನಾಂಕ: 01-09-2021 ರಿಂದ ಜಾರಿಗೆ ಬರುವಂತೆ ಚಾಲನೆ ಮಾಡಲಾಗುವುದು. ಅಭಿಯಂತರರು ಈಗಾಗಲೇ ತಾವು ಹೊಂದಿರುವ ಸಿಮ್ ಕಾರ್ಡ್‌ಗಳನ್ನು ದಿನಾಂಕ: 15-09-2021ರಿಂದ ಜಾರಿಗೆ ಬರುವಂತೆ ನಿಷ್ಕ್ರೀಯ ಗೊಳಿಸಲಾಗುವುದು. ಆ ಸಮಯದೊಳಗೆ ಸಂಬಂದಿತ ಅಧಿಕಾರಿಗಳು ಪಾಲಿಕೆಯ ಬ್ಯಾಂಕ್ ಖಾತೆಗಳು ಮತ್ತೀತರೆ ಕಛೇರಿ ಕೆಲಸ ಕಾರ್ಯಗಳಿಗೆ ಸಂಬಂದಿಸಿದಂತೆ ನಿಯಮಾನುಸಾರ ಬದಲಾವಣೆ ಮಾಡಿಕೊಳ್ಳಲು ಮತ್ತು ಸದರಿ Sim Cardಗಳನ್ನು ಸಂಬಂದಿಸಿದ ಅಭಿಯಂತರರುಗಳಿಗೆ ವಿತರಿಸಿ ಉಲ್ಲೇಖ(3)ರ ಸುತ್ತೋಲೆಯಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಲು ಈ ಮೂಲಕ ಕೋರಿದೆ.

ಈಗಾಗಲೇ ಬಳಸಲಾಗುತ್ತಿರುವ ಸಿಮ್ ಕಾರ್ಡ್‌ಗಳನ್ನು ಬದಲಾವಣೆ ಮಾಡಿಕೊಂಡ ನಂತರ / ದಿನಾಂಕ: 15-09-2021ರೊಳಗಾಗಿ (ಯಾವುದು ಮೊದಲೋ ಅದು) ಮಾಹಿತಿ ತಂತ್ರಜ್ಞಾನ ಇಲಾಖೆಗೆ ಹಿಂತಿರುಗಿಸಬೇಕಾಗಿರುತ್ತದೆ. ತಪ್ಪಿದಲ್ಲಿ ದಿನಾಂಕ: 15-09-2021ರ ನಂತರ ಈಗಾಗಲೇ ವಿತರಿಸಿರುವ ವಿದ್ಯುತ್ ವಿಭಾಗದ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಿರಿಯ ಅಭಿಯಂತರರುಗಳ ದೂರವಾಣಿ ಸಂಖ್ಯೆಗಳು ಸ್ವಯಂಚಾಲಿತವಾಗಿ ನಿಷ್ಕ್ರೀಯಗೊಳಿಸಲಾಗುವುದು.

**ವಂದನೆಗಳೊಂದಿಗೆ,**

**ತಮ್ಮ ವಿಶ್ವಾಸಿ**
31/08/2021

**(ಬಿ ಪ್ರಭಾಕರ)**
**ಮಾಹಿತಿ ತಂತ್ರಜ್ಞಾನ ಸಲಹೆಗಾರರು**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

<u>ಪ್ರತಿಯನ್ನು ಮಾಹಿತಿಗಾಗಿ :-</u>

1. ಮಾನ್ಯ ಆಡಳಿತಗಾರರ ಆದ್ಯ ಗಮನಕ್ಕೆ ತರಲು ಆಪ್ತ ಕಾರ್ಯದರ್ಶಿಗಳಿಗೆ.
2. ಮಾನ್ಯ ಮುಖ್ಯ ಆಯುಕ್ತರ ಆದ್ಯ ಗಮನಕ್ಕೆ ತರಲು ಆಪ್ತ ಕಾರ್ಯದರ್ಶಿಗಳಿಗೆ.
3. ಎಲ್ಲಾ ವಿಶೇಷ ಆಯುಕ್ತರುಗಳಿಗೆ / ಎಲ್ಲಾ ವಲಯ ಆಯುಕ್ತರುಗಳಿಗೆ.
4. ಪ್ರಧಾನ ಅಭಿಯಂತರರು / ಹೆಚ್ಚುವರಿ ನಿರ್ದೇಶಕರು ನಗರ ಯೋಜನೆ.
5. ಎಲ್ಲಾ ವಲಯ ಜಂಟಿ ಆಯುಕ್ತರುಗಳಿಗೆ.
6. ಎಲ್ಲಾ ಮುಖ್ಯ ಅಭಿಯಂತರರುಗಳಿಗೆ.
7. ಎಲ್ಲಾ ಅಧೀಕ್ಷಕ ಅಭಿಯಂತರರುಗಳಿಗೆ.
8. ಜಂಟಿ ನಿರ್ದೇಶಕರು ನಗರ ಯೋಜನೆ (ಉತ್ತರ / ದಕ್ಷಿಣ)ರವರಿಗೆ.
9. ಉಪ ಆಯುಕ್ತರು (ಆಡಳಿತ)ರವರಿಗೆ ಕಳುಹಿಸಿಕೊಡುತ್ತಾ ಅಧಿಕಾರಿಗಳ ವರ್ಗಾವಣೆ ಆದೇಶಗಳಲ್ಲಿ ಉಲ್ಲೇಖ(3)ರ ಸುತ್ತೋಲೆಯಂತೆ ಸೂಕ್ತ ಷರತ್ತುಗಳನ್ನು ವಿಧಿಸಲು ಕೋರಿದೆ.
10. ಉಪ ಆಯುಕ್ತರು (ಮಾಹಿತಿ ತಂತ್ರಜ್ಞಾನ) ಮಾಹಿತಿಗಾಗಿ.
11. ಪಾಲಿಕೆಯ ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ / ಬಡವಾಟೆ ಅಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
12. ನೋಡಲ್ ಅಧಿಕಾರಿಗಳು, ಸಹಾಯ-2.0 ರವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
13. ಸಾರ್ವಜನಿಕ ಸಂಪರ್ಕಾಧಿಕಾರಿಗಳುರವರಿಗೆ ಕಳುಹಿಸಿಕೊಡುತ್ತಾ ಈ ಬಗ್ಗೆ ಸಾರ್ವಜನಿಕ ಪ್ರಕಟಣೆ ಹೊರಡಿಸಲು ಕೋರಿದೆ.
14. ಪಾಲಿಕೆಯ ಎಲ್ಲಾ ಅಧಿಕಾರಿ / ನೌಕರರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
15. ಪಾಲಿಕೆಯ ಕೇಂದ್ರ ಕಛೇರಿ ಮತ್ತು ವಲಯ ಕಛೇರಿಗಳ ನಿಯಂತ್ರಣ ಕೊಠಡಿಗಳಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
16. ಕಛೇರಿ ಪ್ರತಿ.

-4-

# ಅನುಬಂಧ-1

| ಕಾರ್ಯಪಾಲಕ ಅಭಿಯಂತರರು | ಸಹಾಯಕ ಕಾರ್ಯಪಾಲಕ ಅಭಿಯಂತರರು | ದೂರವಾಣಿ ಸಂಖ್ಯೆ | ಕಿರಿಯ ಅಭಿಯಂತರರು | ದೂರವಾಣಿ ಸಂಖ್ಯೆ |
|---|---|---|---|---|
| ಅಧೀಕ್ಷಕರ ಅಭಿಯಂತರರು 9480688526 | | | | |
| ಕಾ.ಅ. (ವಿದ್ಯುತ್-ಪೂರ್ವ) 9480688527 | ಸ.ಕಾ.ಅ. (ವಿ-ಪೂರ್ವ-1) | 9480688535 | ಕಿರಿಯ ಅಭಿಯಂತರರು (ವಿ-ಪೂ-1) | 9480688546 |
| | ಸ.ಕಾ.ಅ. (ವಿ-ಪೂರ್ವ-2) | 9480688536 | ಕಿರಿಯ ಅಭಿಯಂತರರು (ವಿ-ಪೂ-2) | 9480688547 |
| | | | ಕಿರಿಯ ಅಭಿಯಂತರರು (ವಿ-ಪೂ-3) | 9480688548 |
| ಕಾ.ಅ. (ವಿದ್ಯುತ್-ಪಶ್ಚಿಮ) 9480688528 | ಸ.ಕಾ.ಅ. (ವಿ-ಪಶ್ಚಿಮ-1) | 9480688537 | ಕಿರಿಯ ಅಭಿಯಂತರರು (ವಿ-ಪ-1) | 9480688549 |
| | ಸ.ಕಾ.ಅ. (ವಿ-ಪಶ್ಚಿಮ-2) | 9480688538 | ಕಿರಿಯ ಅಭಿಯಂತರರು (ವಿ-ಪ-2) | 9480688550 |
| | | | ಕಿರಿಯ ಅಭಿಯಂತರರು (ವಿ-ಪ-3) | 9480688551 |
| ಕಾ.ಅ. (ವಿದ್ಯುತ್-ದಕ್ಷಿಣ) 9480688529 | ಸ.ಕಾ.ಅ. (ವಿ-ದಕ್ಷಿಣ-1) | 9480688539 | ಕಿರಿಯ ಅಭಿಯಂತರರು (ವಿ-ದ-1) | 9480688552 |
| | ಸ.ಕಾ.ಅ. (ವಿ-ದಕ್ಷಿಣ-2) | 9480688540 | ಕಿರಿಯ ಅಭಿಯಂತರರು (ವಿ-ದ-2) | 9480688553 |
| | | | ಕಿರಿಯ ಅಭಿಯಂತರರು (ವಿ-ದ-3) | 9480688554 |
| ಕಾ.ಅ. (ವಿದ್ಯುತ್-ರಾ.ರಾ.ನಗರ) 9480688530 | ಸ.ಕಾ.ಅ. (ವಿ-ರಾ.ರಾ.ನಗರ) | 9480688541 | ಕಿರಿಯ ಅಭಿಯಂತರರು (ವಿ-ರಾ.ರಾ.ನ) | 9480688555 |
| ಕಾ.ಅ. (ವಿದ್ಯುತ್-ದಾಸರಹಳ್ಳಿ) 9480688531 | ಸ.ಕಾ.ಅ. (ವಿ-ದಾಸರಹಳ್ಳಿ) | 9480688542 | ಕಿರಿಯ ಅಭಿಯಂತರರು (ವಿ-ದಾ) | 9480688556 |
| ಕಾ.ಅ. (ವಿದ್ಯುತ್-ಮಹದೇವಪುರ) 9480688532 | ಸ.ಕಾ.ಅ. (ವಿ-ಮಹದೇವಪುರ) | 9480688543 | ಕಿರಿಯ ಅಭಿಯಂತರರು (ವಿ-ಮ.ಪು-1) | 9480688557 |
| ಕಾ.ಅ. (ವಿದ್ಯುತ್-ಯಲಹಂಕ) 9480688533 | ಸ.ಕಾ.ಅ. (ವಿ-ಯಲಹಂಕ) | 9480688544 | ಕಿರಿಯ ಅಭಿಯಂತರರು (ವಿ-ಯ) | 9480688558 |
| ಕಾ.ಅ. (ವಿದ್ಯುತ್-ಬೊಮ್ಮನಹಳ್ಳಿ) 9480688534 | ಸ.ಕಾ.ಅ. (ವಿ-ಬೊಮ್ಮನಹಳ್ಳಿ) | 9480688545 | ಕಿರಿಯ ಅಭಿಯಂತರರು (ವಿ-ಬೊ) | 9480688559 |

31/08/2024

**(ಬಿ ಪ್ರಭಾಕರ)**
**ಮಾಹಿತಿ ತಂತ್ರಜ್ಞಾನ ಸಲಹೆಗಾರರು**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**